ಭಾರತಿ
**ಪಿಡಬ್ಲೂ-1**

**ದಿನಾಂಕ 15.10.2024 ರಂದು** ಸಾಕ್ಷಿಗೆ **ಪ್ರಮಾಣ ವಚನ ಬೋಧಿಸಲಾಯಿತು.**
ಮುಂದುವರಿದ ಪಾಟಿ ಸವಾಲು ಪ್ರತಿವಾದಿಯರ ಪರ ಸಿ ಎಸ್ ಎಸ್ **ವಕೀಲರವರಿಂದಃ**

ಕಟ್ಟೇರಿ ಗ್ರಾಮ ಪಂಚಾಯತಿಯವರು ರಚಿಸಿರುವ ನಿವೇಶನಗಳ ಸ್ಕೇಚ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ನಿವೇಶನವು ನಮಗೆ ಮಂಜೂರಾಗುವ ಪೂರ್ವದಲ್ಲಿ ಸದರಿ ನಿವೇಶನವು ಕಟ್ಟೇರಿ ಗ್ರಾಮ ಪಂಚಾಯತಿಗೆ ಸೇರಿರುತ್ತದೆ ಎಂದು ತೋರಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕಟ್ಟೇರಿ ಗ್ರಾಮ ಪಂಚಾಯತಿ ಮಂಜೂರು ಮಾಡಲು ತಾಲೂಕು ಪಂಚಾಯತಿ ಅನುಮತಿ ಪಡೆದಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕಟ್ಟೇರಿ ಗ್ರಾಮ ಪಂಚಾಯತಿಯವರು ಯಾರು ಯಾರು ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ದಾವಾ ನಿವೇಶನದ ಸರ್ವೆ ನಂಬರ 241 ವಿಸ್ತೀರ್ಣ 1 ಎಕರೆ 25 ಗುಂಟೆ ಸ್ವತ್ತನ್ನು ದಿನಾಂಕ 04.02.1982 ರಲ್ಲಿ ಪಾಂಡವಪುರ ತಹಸೀಲ್ದಾರವರು ದರ್ಕಾಸ್ತು ಮೂಲಕ 1 ನೇ ಪ್ರತಿವಾದಿ ಮಾವನಾದ ರಾಮಯ್ಯ ಬಿನ್ ರಂಗಯ್ಯನವರಿಗೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ನಾವೇ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿದರು. ದಾವಾ ಸ್ವತ್ತಿನ ಉತ್ತರಕ್ಕೆ 1 ನೇ ಪ್ರತಿವಾದಿಯವರ ಜಮೀನು ಇರುತ್ತದೆ. ಸರ್ವೆ ನಂಬರ 241 ರಲ್ಲಿ ರಸ್ತೆ ಮಾಡಲು ಪ್ರಯತ್ನಿಸಿದಾಗ ಪ್ರತಿವಾದಿಯರು ಕಟ್ಟೇರಿ ಗ್ರಾಮ ಪಂಚಾಯತಿಯ ವಿರುದ್ಧ ಅ ದಾ ಸಂ 328/2021 ರಂತೆ ದಾವೆ ಸಲ್ಲಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 241 ಇಂಡೀಕರಣವಾಗಿ ಹೊಸ ಸ ನಂ 285 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮಾವ, ಗಂಡ ಮತ್ತು ಮಗನ ಸಮಾಧಿಗಳು ಸದರಿ ಸರ್ವೆ ನಂಬರನಲ್ಲಿ ಇವೆ ಎಂದರೆ ನನಗೆ ಗೊತ್ತಿಲ್ಲ. ಕಟ್ಟೇರಿ ಗ್ರಾಮ ಪಂಚಾಯತಿಯವರು, ಪ್ರತಿವಾದಿಯವರು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ, ನಾವು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಗ್ರಾಮ ಪಂಚಾಯತಿ ಸದಸ್ಯರಾಗಿದ್ದಾಗ, ದಾಖಲೆಗಳನ್ನು ನನ್ನ ಹೆಸರಿಗೆ ಸೃಷ್ಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಪ್ರತಿವಾದಿಯವರಿಗೆ ಸ್ಥಳೀಯರ ಸಹಕಾರವಿಲ್ಲದೇ ಇರುವುದನ್ನು ದುರುಪಯೋಗಪಡಿಸಿಕೊಂಡು ನಾವು ಮತ್ತು ಕಟ್ಟೇರಿ ಗ್ರಾಮ ಪಂಚಾಯತಿಯವರು ದಾಖಲೆಗಳನ್ನು ಸೃಷ್ಟಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ಮುಂದವರಿದ ವಾದಿ ಪರ ವಿಚಾರಣೆ ಇಲ್ಲ ಎಂದು ನುಡಿದಿರುತ್ತಾರೆ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

**2** ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾಂಡವಪುರ